# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 840 |
| ಸದಸ್ಯರ ಹೆಸರು | : | ಶ್ರೀ ವೈ.ಎಂ.ಸತೀಶ್ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 22.02.2024 |
| ಉತ್ತರಿಸುವ ಸಚಿವರು | : | ಮಾನ್ಯ ಉಪ ಮುಖ್ಯಮಂತ್ರಿಗಳು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕರ್ನಾಟಕ ನೀರಾವರಿ ನಿಗಮ ನಿಯಮಿತ ವ್ಯಾಪ್ತಿಯಲ್ಲಿ ಬರುವ ಬಳ್ಳಾರಿ ಗ್ರಾಮಾಂತರದ ಹರಗಿನದೋಣಿ ಮತ್ತು ಇತರೆ ಹಳ್ಳಿಗಳಿಗೆ ಸಂಡೂರು ತಾಲ್ಲೂಕಿನ 59 ಕೆರೆಗಳಿಗೆ ತುಂಗಭದ್ರ ಹಿನ್ನೀರಿನಿಂದ ಕೊಟ್ಟೂರು ಕೆರೆ ಮತ್ತು ಇತರೆ 16 ಕೆರೆಗಳಿಗೆ ಕಂಪ್ಲಿ ತಾಲ್ಲೂಕಿನ ಮುದ್ದಾಪುರ, ರಾಮಚಂದ್ರಾಪುರ, ಶ್ರೀಧರಗಡ್ಡೆ ಮತ್ತು ಇತರ ಹಳ್ಳಿಗಳ ಕೆರೆಗಳಿಗೆ ನೀರು ತುಂಬಿಸುವ ಯೋಜನೆಗಳು ಯಾವ ಹಂತದಲ್ಲಿವೆ; (ಸಂಪೂರ್ಣ ಮಾಹಿತಿ ನೀಡುವುದು) | 1. ಬಳ್ಳಾರಿ ತಾಲ್ಲೂಕಿನ ಹರಗಿನದೋಣಿ, ಜಾನಿಕುಂಟೆ ಮತ್ತು ಜಾನಿಕುಂಟೆ ತಾಂಡ ಹಾಗೂ ಬಳ್ಳಾರಿ ತಾಲ್ಲೂಕಿನ ಅಸುಂಡಿ ಮತ್ತು ಅಮರಾಪುರ, ಬೇವಿನಹಳ್ಳಿ, ಕಕ್ಕಬೇವಿನಹಳ್ಳಿ, ತೆಗ್ಗಿನ ಬೂದಿಹಾಳ, ಗೋಡಿಹಾಳ್ ಗ್ರಾಮಗಳಿಗೆ ಕುಡಿಯುವ ನೀರನ್ನು ಒದಗಿಸುವ ಯೋಜನೆಯ ರೂ.48.49 ಕೋಟಿ ಮೊತ್ತದ ವಿವರವಾದ ಯೋಜನಾ ವರದಿಯು ಕರ್ನಾಟಕ ನೀರಾವರಿ ನಿಗಮದಲ್ಲಿ ಪರಿಶೀಲನೆಯಲ್ಲಿರುತ್ತದೆ.<br>ಮುಂದುವರೆದು, ಸದರಿ ಯೋಜನೆಯಡಿ ಸಿಂಧವಾಳ ಗ್ರಾಮದ ಹತ್ತಿರ ಬ್ರಿಡ್ಜ್ ಕಂ ಬ್ಯಾರೇಜ್ ನಿರ್ಮಾಣ ಮತ್ತು ಅಸುಂಡಿ, ಲಿಂಗದೇವನಹಳ್ಳಿ ಮತ್ತು ಕಕ್ಕಬೇವಿನಹಳ್ಳಿ ಗ್ರಾಮಗಳ ಹತ್ತಿರ ಕಿರು ಸೇತುವೆ ನಿರ್ಮಾಣವೂ ಸೇರಿರುತ್ತದೆ.<br>2. ಬಳ್ಳಾರಿ ಜಿಲ್ಲೆ ಸಂಡೂರು ತಾಲ್ಲೂಕಿನ 40 ಹಳ್ಳಿಗಳ ಅಂತರ್ಜಲ ಮಟ್ಟವನ್ನು ವೃದ್ಧಿಸಲು ಹಾಗೂ ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸಲು ತುಂಗಭದ್ರಾ ನದಿಯಿಂದ ಕಲಘಟ್ಟ ಮತ್ತು ಸಂಡೂರು ಗ್ರಾಮದ ಹತ್ತಿರ 1.433 ಟಿ.ಎಂ.ಸಿ. ನೀರನ್ನು ಉಪಯೋಗಿಸಿ ಸಂಡೂರು ತಾಲ್ಲೂಕಿನ ವ್ಯಾಪ್ತಿಯ 59 ಕೆರೆಗಳನ್ನು ತುಂಬಿಸುವ ಯೋಜನೆಯ ರೂ.1305.00 ಕೋಟಿ ಮೊತ್ತದ ವಿವರವಾದ ಯೋಜನಾ ವರದಿಯು ಕರ್ನಾಟಕ ನೀರಾವರಿ ನಿಗಮದಲ್ಲಿ ಪರಿಶೀಲನೆಯಲ್ಲಿರುತ್ತದೆ.<br>3. ತುಂಗಭದ್ರಾ ಜಲಾಶಯದ ಹಿನ್ನೀರಿನಿಂದ ನೀರನ್ನು ಎತ್ತಿ ಕುಡಿಯುವ ನೀರು ಒದಗಿಸಲು ಹಾಗೂ ಅಂತರ್ಜಲ ಮಟ್ಟವನ್ನು ಹೆಚ್ಚಿಸಲು ಕೊಟ್ಟೂರು ಕೆರೆ ಮತ್ತು ಇತರೆ 16 ಕೆರೆಗಳನ್ನು ತುಂಬಿಸುವ ರೂ.379.00 ಕೋಟಿ ಮೊತ್ತದ ಯೋಜನೆಯ ಪ್ರಸ್ತಾವನೆಯು ಕರ್ನಾಟಕ ನೀರಾವರಿ ನಿಗಮದ ಹಂತದಲ್ಲಿ ಪರಿಶೀಲನೆಯಲ್ಲಿರುತ್ತದೆ. |
| ಆ) | ಈ ಕೆರೆ ತುಂಬಿಸುವ ಯೋಜನೆಗಳಿಂದ ಆಗುವ ಪ್ರಯೋಜನಗಳೇನು; ಕುಡಿಯುವ ನೀರು ಮತ್ತು ಕೃಷಿ ವಲಯಕ್ಕೆ ಸಿಗುವ ಅನುಕೂಲಗಳೇನು; (ಯೋಜನೆಗಳವಾರು ಮಾಹಿತಿ ನೀಡುವುದು) | |
| ಇ) | ಈ ಕರ್ನಾಟಕ ನೀರಾವರಿ ನಿಗಮ ವ್ಯಾಪ್ತಿಗೆ ಬರುವ ಈ ಯೋಜನೆಗಳನ್ನು ಕಾರ್ಯಗತಗೊಳಿಸಲು ಇರುವ ತೊಡಕುಗಳೇನು; ಯಾವ ಕಾಲ ಮಿತಿಯಲ್ಲಿ ಈ ಯೋಜನೆಗಳನ್ನು ಜಾರಿಗೆ ತರಲಾಗುವುದು? | ಮೇಲ್ಕಂಡ ಯೋಜನೆಗಳು ನಿಗಮದ ಪರಿಶೀಲನೆಯಲ್ಲಿದ್ದು, ಅನುದಾನ ಲಭ್ಯತೆ ಆಧರಿಸಿ ಅಗತ್ಯ ಅನುಮೋದನೆಯೊಂದಿಗೆ ಯೋಜನೆಗಳನ್ನು ಅನುಷ್ಠಾನಗೊಳಿಸುವ ಬಗ್ಗೆ ಪರಿಶೀಲಿಸಲಾಗುವುದು. |

ಜಸಂಇ 42 ಎಂಎಲ್‌ಎ 2024

(ಡಿ.ಕೆ. ಶಿವಕುಮಾರ್)
ಉಪ ಮುಖ್ಯಮಂತ್ರಿ